# ಯಾಜ್ಞಸೇನಿಯ ಆತ್ಮಕಥನ: ದಲಿತತತ್ವದ ನೆಲೆಗಳು

**ವಿಜಯಲಕ್ಷ್ಮಿ ದತ್ತಾತ್ರೇಯ ದೊಡ್ಡಮನಿ**

ಸಂಶೋಧನಾರ್ಥಿ, ಕನ್ನಡ ವಿಭಾಗ, ಕರ್ನಾಟಕ ಕೇಂದ್ರಯ ವಿಶ್ವವಿದ್ಯಾಲಯ, ಕಲ್ಬುರ್ಗಿ.

**Received: 13-07-2024 ; Acepted: 10-08-2024 ; Published: 07-09-2024**

**DOI: https://doi.org/10.5281/zenodo.13725621**

**ABSTRACT:**

ದಲಿತರು ಎಂದರೆ ಶೋಷಿತರು ಎನ್ನುವುದು ಕೇವಲ ಹಾಳೆಗಳಲ್ಲಿ, ಅಕ್ಷರ ರೂಪದಲ್ಲಿ ಮಾತ್ರ ಉಳಿದುಕೊಂಡಿದೆ. ಸಮಾಜದಲ್ಲಿ ಅದು ರೂಢಿಗೆ ಬಂದೇ ಇಲ್ಲ. ದಲಿತ ಎಂದರೆ ಕೇವಲ ಜಾತಿ ಸೂಚಕ ಪದವಾಗಿ ಮಾತ್ರ ಬಳಕೆಯಲ್ಲಿದೆ. ಎಲ್ಲಾ ವಿದ್ವಾಂಸರ ಹೇಳಿಕೆ ಗಳನ್ನು ಆಧಾರವಾಗಿಟ್ಟುಕೊಂಡು, ಯಾವುದೇ ವರ್ಗದ ಶೋಷಿತ ಮಹಿಳೆಯನ್ನು ದಲಿತ ಮಹಿಳೆ ಎಂದು ಗುರುತಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿಯೇ ಮಹಾಭಾರತದಲ್ಲಿ ಮುಖ್ಯ ಪಾತ್ರವಾಗಿ ಕಾಣುವ ದ್ರೌಪದಿಯು ಮಾನಸಿಕವಾಗಿ, ಕೆಲವೊಮ್ಮೆ ದೈಹಿಕವಾಗಿ ನಿರಂತರವಾಗಿ ಶೋಷಣೆಗೆ ಒಳಗಾಗಿದ್ದಾಳೆ. ಆದ್ದರಿಂದಲೇ ಈ ಲೇಖನದಲ್ಲಿ ಯಾಜ್ಞಸೇನೆಯನ್ನು ದಲಿತ ಸ್ತ್ರೀ ಎಂದು, ಅವಳ ಪ್ರಜ್ಞಾಪೂರ್ವಕವಾದ ವ್ಯವಸ್ಥೆಯ ವಿರುದ್ಧವಾದ ಧ್ವನಿಯನ್ನು ದಲಿತತ್ವದ ಧ್ವನಿಯಾಗಿ ಗುರುತಿಕೊಂಡು ಈ ಲೇಖನದಲ್ಲಿ ಚರ್ಚಿಸಿಲಾಗಿದೆ.

**KEYWORDS:**

ದಲಿತತ್ವ , ಯಾಜ್ಞಸೇನಿ, ಪ್ರಜ್ಞೆ, ಮಹಾಭಾರತ, ದ್ರೌಪದಿ, ಶೋಷಿತರು, ಪಾಂಚಾಲಿ.

ಹಸಿವು, ಅವಮಾನ, ಶೋಷಣೆಗಳು, ಅಸ್ಪೃಶ್ಯತೆ, ಇವುಗಳನ್ನೆ ಮುಖ್ಯವಾಗಿಟ್ಟುಕೊಂಡು ದಲಿತರು ಯಾರು? ಎನ್ನುವ ಪ್ರಶ್ನೆಗೆ ಅನೇಕ ವಿದ್ವಾಂಸರು ತಮ್ಮದೇ ಆದ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ದಲಿತರು ಎಂದರೆ ಒಂದು ಅರ್ಥದಲ್ಲಿ ನಿರಂತರವಾಗಿ ಶೋಷಣೆಗೆ ಒಳಗಾದ, ಎಲ್ಲಾ ವರ್ಗದ ಜನರನ್ನು ದಲಿತರು ಎಂದು ಕರೆಯಬಹುದು. 'ಶೋಷಣೆ ಎಂಬ ಪದಕ್ಕೆ ಜಾತಿಭೇದವಿಲ್ಲ; ಆರ್ಥಿಕ, ಸಾಮಾಜಿಕ, ರಾಜಕೀಯ ರಂಗದಲ್ಲೆಲ್ಲ ಶೋಷಣೆಗೆ ಒಳಗಾದ ಜನರು ದಲಿತರು. 'ದಲಿತ' ಶಬ್ದ ಜಾತಿ ಸೂಚಕವಾಗಿ ಬಳಕೆ ಯಾಗಿರುವುದೇ ಒಂದು ದೊಡ್ಡ ದುರಂತವಾಗಿದೆ. ದಲಿತರೆಂದರೆ ಕೇವಲ ಪರಿಶಿಷ್ಟ ಜಾತಿ, ಬುಡಕಟ್ಟುಗಳಲ್ಲವೆಂದು, ದೈಹಿಕ, ಮಾನಸಿಕ, ಹೊಡೆತಕ್ಕೆ ಗುರಿಯಾದ ಆರ್ಥಿಕ, ಸಾಮಾಜಿಕವಾಗಿ ಶೋಷಿತರಾದ, ಸಾಂಸ್ಕೃತಿಕವಾಗಿ ದಿವಾಳಿಯಾದ, ದುರ್ಬಲ ವರ್ಗದವರೆಲ್ಲ ದಲಿತರು. ಸಿದ್ದಲಿಂಗಯ್ಯನವರು ಹೇಳುವ ಹಾಗೆ "ಆತ ದಲಿತನಾಗಿ ಹುಟ್ಟಬೇಕು, ದಲಿತರ ಬಗ್ಗೆ ಅನುಕಂಪ ಉಳ್ಳವನಾಗಿರಬೇಕು, ಶೋಷಣೆ, ದಬ್ಬಾಳಿಕೆ, ಅತ್ಯಾಚಾರಗಳ ವಿರುದ್ಧ ರಕ್ತ ಕುದಿಯುವವನಾಗಿರಬೇಕು. ಇವುಗಳ ಜೊತೆಗೆ ಆತ ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ಶೋಷಿಸಲ್ಪಟ್ಟು ಆ ಶೋಷಣೆಯ

ಪ್ರಜ್ಞೆಯು ಅವನಿಗಿರಬೇಕು. ತಾನಿರುವ ಮಿತಿಯೊಳಗಿನಿಂದ ಹೊರಬಂದು ಉಳಿದವರಿಗಿರುವ ಹಕ್ಕುಗಳೆಲ್ಲವನ್ನು ಪಡೆದುಕೊಳ್ಳಲು, ಹೋರಾಡಲು ಸಿದ್ಧವಿರಬೇಕು. ಯಾರಿಗೆ ಶೋಷಣೆಯ ಪ್ರಜ್ಞೆ ಇಲ್ಲವೋ, ಯಾರಲ್ಲಿ ಹೋರಾಟದ ಭಾವನೆ ತಣ್ಣಗಿರುತ್ತದೆಯೋ ಅವರಾರು ದಲಿತರಲ್ಲ"[1] ಎಂದು ಹೇಳಿದ್ದಾರೆ.

ಅದೇ ರೀತಿಯಾಗಿ ಹನುಮಂತಯ್ಯನವರು "ಸಂಘಟನಾತ್ಮಕ ಹೋರಾಟದ ದೃಷ್ಟಿಯಿಂದ ಈ ಪದದ [ದಲಿತ] ವ್ಯಾಪ್ತಿಯನ್ನು ದೊಡ್ಡದು ಮಾಡಿ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಶೋಷಿತರಾದ ಎಲ್ಲಾ ಜನ ವರ್ಗವನ್ನು ಸೇರಿಸಿದರೂ, ಸಾಹಿತ್ಯಿಕವಾಗಿ ಅಸ್ಪೃಶ್ಯತೆಯನ್ನ ನಿವಾರಿಸಲು ಅಸ್ಪೃಶ್ಯರು ಮತ್ತು ಇವರಷ್ಟೇ ಶೋಷಣೆಗೊಳಗಾದ ಕೆಳವರ್ಗದವರು ದಲಿತರಾಗುತ್ತಾರೆ"[2] ಎಂದು ಹೇಳಿದ್ದಾರೆ. ದಲಿತ ಸಂಘರ್ಷ ಸಮಿತಿ ಸಂವಿಧಾನದ ಪ್ರಕಾರ "ದಲಿತರು ಎಂದರೆ ಅಸ್ಪೃಶ್ಯರು ಮತ್ತು ಜಾತಿಯಿಂದ ಅವಮಾನಿತರಾದವರು, ಮತ್ತು ಹೇಳಲೇಬೇಕೆಂದರೆ ಯಾರು ಹಿಂದೂ ಚಾತುರ್ವರ್ಣದ ಶ್ರಮ ವಿಭಜನೆಯ ಕುತಂತ್ರಕ್ಕೆ ಈಡಾಗಿ ಕೀಳು ವೃತ್ತಿಗಳನ್ನೇ ತಲತಲಾಂತರದಿಂದ ಅವಲಂಬಿಸಿ ಜಾತಿಯ ಹೆಸರು ಹೇಳಿಕೊಳ್ಳಲೂ ನಾಚಿಕೆ ಪಡುತ್ತಾರೋ ಅವರು"[3] ಈ ವ್ಯಾಖ್ಯಾನ ಸಂಕೀರ್ಣವಾಗಿದ್ದು ಇದು ನೇರವಾಗಿ ಅಸ್ಪೃಶ್ಯರನ್ನು ಗುರುತಿಸುವುದಿಲ್ಲ ಅವರನ್ನು ಮೀರಿ ಈ ವ್ಯಾಖ್ಯಾನದ ವ್ಯಾಪ್ತಿ ಇದೆ.

ಮೊಗಳ್ಳಿ ಗಣೇಶ್ ಅವರು "ದಲಿತತ್ವ ಎನ್ನುವುದು ಒಂದು ಬಿಡುಗಡೆಯ ಪ್ರಕ್ರಿಯೆಯ, ಅಂತರಂಗದ ಸಾಕ್ಷಿಪ್ರಜ್ಞೆಯ, ಒಳದನಿಯಾಗಿ, ಸಮುದಾಯಗಳ ಸಾಂಸ್ಕೃತಿಕ ಪುನರ್ ರಚನೆಯಾಗಿ, ಪರಿಶೀಲನೆಯಾಗಿ ಆಧುನಿಕತೆಯ ಜೊತೆ ಮುಖಾ ಮುಖಿಯಾಗುವ ಸ್ಥಿತಿ"[4] ಎಂದು ಹೇಳುತ್ತಾರೆ. ಎಂ. ಚಂದ್ರ ಪೂಜಾರಿ ಅವರು ದಲಿತತ್ವವನ್ನು ಸಮಾನರು ಎನ್ನುವ ಪ್ರಜ್ಞೆಯ ನೆಲೆಯಲ್ಲಿ ವಿವರಿಸಿದ್ದಾರೆ. 'ದಲಿತ ಪರಿಭಾಷೆಯನ್ನು ಎಲ್ಲಾ ಸಮುದಾಯಗಳಲ್ಲಿರುವ ಶೋಷಿತರೆಂದು ನೋಡಿದರೆ ಸಮಷ್ಠಿಯಲ್ಲಿರುವ ದಲಿತತ್ವದ ಪರಿಚಯ ಸಾಧ್ಯ. ಎಲ್ಲ ಸಮುದಾಯಗಳಲ್ಲಿರುವ ತಳಸ್ತರದ ಜನರು ದಲಿತರು ಅನುಭವಿಸುವ ಅಸ್ಪೃಶ್ಯತೆಯನ್ನು ಅನುಭವಿಸುವುದಿಲ್ಲ. ಆದರೆ ದಲಿತರು ಅನುಭವಿಸುವ ಇತರ ಅಸಾಮರ್ಥ್ಯಗಳನ್ನು ಅನುಭವಿಸುತ್ತಾರೆ. ಹೊರಗಿಡಲ್ಪಡುವುದು, ಮೂಲೆಗುಂಪಾಗುವುದು, ಏಣಿಯ ಬುಡದಲ್ಲಿರುವುದು ಇತ್ಯಾದಿ ಗುಣಗಳನ್ನು ಎಲ್ಲ ಸಮುದಾಯಗಳ ತಳಸ್ಥರದ ಜನರು ಮತ್ತು ಮಹಿಳೆಯರು ವಿವಿಧ ಪ್ರಮಾಣದಲ್ಲಿ ಅನುಭವಿಸುತ್ತಾರೆ' ಎಂದಿದ್ದಾರೆ. ಸುನೀಲ ಜಾಬಾದಿ ಅವರು ಹೇಳುವ ಹಾಗೆ "ನೀವೆಲ್ಲರೂ ಸೋತು ಹೆಣ್ಣನ್ನು ಪಣಕಿಡಬೇಕೆಂದು ನಿಮ್ಮ ಧರ್ಮ ಹೇಳುತ್ತದೆಯೋ, ಹಾಗಾದರೆ ಧರ್ಮ ಮನುಷ್ಯನಿಗಾಗಿ ಇದೆಯೋ ಮನುಷ್ಯ ಧರ್ಮಕ್ಕಾಗಿ ಇದ್ದಾನೆಯೋ"[5] ಎಂದು ಗಂಭೀರವಾಗಿ ಯೋಚಿಸಬೇಕು. ಧರ್ಮವನ್ನು ಪ್ರಶ್ನಿಸುವ ಮಹಿಳೆಯರು ಮುಂದೆ ಬಂದಿರುವುದು ಸ್ವಾರ್ಥಕ್ಕಾಗಿ ಅಲ್ಲ ಎಂದು ಲೇಖಕಿ ವ್ಯಕ್ತಪಡಿಸುತ್ತಾರೆ. 'ದಲಿತತ್ವವು ಮನುಷ್ಯ ಪರವಾಗಿರುವ ಸಮುದಾಯದ ಹಿತ ಕಾಯುವ ತತ್ವವಾಗಿದೆ'. ಶೋಷಿತ ಸಮುದಾಯದ ನೋವು ಸಂಕಟ ಅವಮಾನಗಳು ತನ್ನದೆಂದು ತಿಳಿದು ಅವುಗಳ ನಿವಾರಣೆಗೆ ಮಾರ್ಗವನ್ನು ಕಂಡುಕೊಳ್ಳುವ ಎಚ್ಚರದ ಕಾರ್ಯಗಳೆಲ್ಲವು ದಲಿತತ್ವವಾಗಿವೆ.

ಈ ಎಲ್ಲಾ ವಿದ್ವಾಂಸರ ಹೇಳಿಕೆಗಳನ್ನು ಆಧಾರವಾಗಿಟ್ಟುಕೊಂಡು, ಯಾವುದೇ ವರ್ಗದ ಶೋಷಿತ ಮಹಿಳೆಯನ್ನು ದಲಿತ ಮಹಿಳೆ ಎಂದು ಗುರುತಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿಯೇ ಮಹಾಭಾರತದಲ್ಲಿ ಮುಖ್ಯ ಪಾತ್ರವಾಗಿ ಕಾಣುವ ದ್ರೌಪದಿಯು ಮಾನಸಿಕವಾಗಿ, ಕೆಲವೊಮ್ಮೆ ದೈಹಿಕವಾಗಿ ನಿರಂತರವಾಗಿ ಶೋಷಣೆಗೆ ಒಳಗಾಗಿದ್ದಾಳೆ. ಆದ್ದರಿಂದಲೇ ಈ ಲೇಖನದಲ್ಲಿ ಯಾಜ್ಞಸೇನೆಯನ್ನು ದಲಿತ ಸ್ತ್ರೀ ಎಂದು, ಅವಳ ಪ್ರಜ್ಞಾಪೂರ್ವಕವಾದ ವ್ಯವಸ್ಥೆಯ ವಿರುದ್ಧವಾದ ಧ್ವನಿಯನ್ನು ದಲಿತತ್ವದ ಧ್ವನಿಯಾಗಿ ಗುರುತಿಕೊಂಡು ಈ ಲೇಖನದಲ್ಲಿ ಚರ್ಚಿಸಿಲಾಗಿದೆ.

ರಾಮಾಯಣ ಮಹಾಭಾರತಗಳು ಸಂಸ್ಕೃತ ಮಹಾಕಾವ್ಯಗಳಲ್ಲಿಯೇ ಶ್ರೇಷ್ಠ ಸ್ಥಾನವನ್ನು ಪಡೆದುಕೊಂಡಿವೆ. ಭಾರತದ ಯಾವುದೇ ರಾಜ್ಯದ, ಯಾವುದೇ ಭಾಷೆಯ ಸಾಹಿತ್ಯ ಚರಿತ್ರೆಯನ್ನ ಗಮನಿಸಿದರು, ಅಲ್ಲಿ ಬೇರೆ ಬೇರೆ ರೂಪಗಳನ್ನು ಪಡೆದುಕೊಂಡ ರಾಮಾಯಣ, ಮಹಾಭಾರತದ ಘಟನೆಗಳು, ಪಾತ್ರಗಳು ನಮಗೆ ದೊರೆಯುತ್ತವೆ. ಜನಪದರಲ್ಲಿಯೂ ಅನೇಕ ಭಿನ್ನರೂಪದ ಕಥೆಗಳು ದೊರೆಯುತ್ತವೆ. ಕಾಲಾಂತರದಲ್ಲಿ ಅವುಗಳು ಮಾದರಿ ಕಥನಕಗಳಾಗಿ ಜನಪ್ರಿಯತೆ ಪಡೆದುಕೊಂಡಿವೆ. 21ನೇ ಶತಮಾನದಲ್ಲಿ ತಂತ್ರಜ್ಞಾನದ ಮುಖಾಂತರ ಮಾಧ್ಯಮಗಳಲ್ಲಿ ಧಾರಾವಾಹಿಗಳ ರೂಪ ಪಡೆದುಕೊಂಡಿವೆ. ಮಾಧ್ಯಮಗಳಲ್ಲಿ ಬರುವ ಕಥೆಗಳಲ್ಲಿ ಯಾವ ಪರಿವರ್ತನೆಯು ಮಾಡುವುದಿಲ್ಲ. ಆದರೆ ಕಥೆಯನ್ನು ಬದಲಾಯಿಸಿ, ಪಾತ್ರಗಳ ಆಳಕ್ಕೆ ಇಳಿದು, ಅವುಗಳನ್ನು ಒರೆಗೆ ಹಚ್ಚುವ ಕೆಲಸ ಅನೇಕ ಬರಹಗಾರರು ಕಥೆ, ನಾಟಕ, ಕಾದಂಬರಿಗಳ ಮುಖಾಂತರ ಮಾಡಿದ್ದಾರೆ. ಅಂತಹ ಕೆಲಸವನ್ನು ಹೈದರಾಬಾದ್ ಕರ್ನಾಟಕದ ಬರಹಗಾರ್ತಿ ಡಾ. ಜಯದೇವಿ ಗಾಯಕವಾಡ ಅವರು ಮಾಡಿದ್ದಾರೆ. 'ಯಾಜ್ಞಸೇನಿಯ ಆತ್ಮಕಥನ' ಎಂಬ ಕಾದಂಬರಿಯಲ್ಲಿ.

ದ್ರೌಪದಿಯ ಅಂತರಂಗವನ್ನು ಮುಖ್ಯ ಕಥನ ವಸ್ತುವಾಗಿ ಚಿತ್ರಿಸಿರುವ ಈ ಕಾದಂಬರಿಯಲ್ಲಿ ಸ್ತ್ರೀ ತತ್ವವನ್ನು ವಿಶಾಲವಾದ ಅನುಭವಕ್ಕೆ ಒಡ್ಡಿದ್ದಾರೆ, ಮಹಾಭಾರತದ ನಂತರ ಅನೇಕ ಕೃತಿಗಳು ಬಂದಿವೆ. ಅವುಗಳನ್ನೆಲ್ಲ ಆಯಾ ಲೇಖಕರು ದ್ರೌಪದಿಯ ಅನೇಕ ಮುಖಗಳನ್ನು ಚಿತ್ರಿಸಿದ್ದಾರೆ. ಕನ್ನಡದಲ್ಲಿ ಪಂಪ, ರನ್ನ, ಕುಮಾರವ್ಯಾಸ, ಭೈರಪ್ಪ ಮುಂತಾದವರು ಅವಳ ಒಳತೋಟ್ಟಿಯನ್ನು ಚಿತ್ರಿಸಿದ್ದಾರೆ. ಇರಾವತಿ ಕರ್ವೆಯವರ ಯುಗಾಂತರ ಕೂಡ ಈ ನಿಟ್ಟಿನಲ್ಲಿ ಗುರುತಿಸಲೇಬೇಕಾದ ಹೆಜ್ಜೆಯಾಗಿದೆ. ಈ ಎಲ್ಲಾ ಕೃತಿಗಳನ್ನು ಅರಗಿಸಿಕೊಂಡು ಆಧುನಿಕ ಬದುಕಿನ ಹಿನ್ನೆಲೆಯಲ್ಲಿ ದ್ರೌಪದಿಯನ್ನು ಚಿತ್ರಿಸಲು ಪ್ರಯತ್ನಿಸಿರುವುದು ಲೇಖಕಿಯ ಸಾಹಸವಾಗಿದೆ. ಅದರಲ್ಲೂ ಹೆಣ್ಣಿನ ಭಾವನಾ ಪ್ರಪಂಚವು ಮೇಲ್ನೋಟಕ್ಕೆ ಕಾಣಿಸುವಂತೆ ಸರಳವಾಗಿರುವುದಿಲ್ಲ. ತನ್ನದೆಯಾದ ದೃಷ್ಠಿಕೋನಗಳಿರುತ್ತವೆ ಎನ್ನುವುದನ್ನು ಲೇಖಕಿ ಗುರುತುಸುತ್ತಾರೆ.

ಡಾ. ಜಯದೇವಿ ಗಾಯಕವಾಡ ಅವರು ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ರಾಜೇಶ್ವರ ಗ್ರಾಮದವರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಚಿಡಗುಪ್ಪದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸಾಹಿತ್ಯ ಕ್ಷೇತ್ರಕ್ಕೆ ಕಾವ್ಯ, ಗಜಲ್, ಹೈಕು, ಕಾದಂಬರಿ, ವಿಮರ್ಶೆ, ಸಂಶೋಧನೆ, ವಚನ, ಅಂಬೇಡ್ಕರ್ ಜೀವನ ಚರಿತ್ರೆ, ಸಂಪಾದನೆಗಳು ಸೇರಿ

25ಕ್ಕೂ ಹೆಚ್ಚು ಪುಸ್ತಕಗಳು ಪ್ರಕಟಿಸಿದ್ದಾರೆ. ಲೇಖಕಿಯಾಗಿ ಗಾಯಕವಾಡವರು ಈ ಕಾದಂಬರಿಯಲ್ಲಿಯೇ ಕೆಲವೊಂದು ಮಿಥ್‌ಗಳನ್ನು ಮಿರುತ್ತಾರೆ. ಪಂಚ ಪಾಂಡವರ ಪತ್ನಿ ಯಾಗಿದ್ದರಿಂದಲೇ ಅವಳಿಗೆ ಪಾಂಚಾಲಿ ಎಂಬ ಹೆಸರು ಇದೆ. ಎನ್ನುವ ಕೆಲವೊಂದು ಊಹೆಗಳಿಗೆ ಮೊದಲೇ ಉತ್ತರಿಸುತ್ತಾರೆ. ಪಾಂಚಾಲ ದೇಶವನ್ನು ಆಳುತ್ತಿದ್ದ ಸೋಮಕ ವಂಶದ ವೃಷದನೆಂಬ ಅರಸನ ಮಗನೇ ದ್ರುಪದ, ಈ ದ್ರುಪದನ ಮಗಳೇ ಪಾಂಚಾಲಿ ಅಂದರೆ ತಂದೆಯ ವಂಶದಿಂದ ಬಂದ ಹೆಸರು ಪಾಂಚಾಲಿ ಎನ್ನುವುದು ಸ್ಪಷ್ಟವಾಗುತ್ತದೆ. ಈ ದ್ರುಪದನಿಗೆ ಇರುವ ಇನ್ನೊಂದು ಹೆಸರು 'ಯಾಜ್ಞಸೇನ' ಈ ಹೆಸರೇ ಮಗಳಿಗೆ ಬಂದಿರುವುದನ್ನು ಈ ಕಾದಂಬರಿಯ ಶೀರ್ಷಿಕೆಯ ಮುಖಾಂತರ ತಿಳಿಯುತ್ತೇವೆ.

ಸ್ವಯಂವರದಲ್ಲಿ ಯಾಜ್ಞಸೇನೆಯ ಮನದಲ್ಲಿ ಕರ್ಣನ ಕುರಿತು ಎದ್ದ ಪ್ರಶ್ನೆಗಳಲ್ಲಿ ದಲಿತತ್ವವಿದೆ. "ಕರ್ಣ ಸೂತ ಪುತ್ರನಾದರೆ ಏನಾಯಿತು? ಆತನ ಪೌರುಷ ಸೂತವೇ? ಆತನ ಶೌರ್ಯ ಸೂತವೇ? ಹೀಗೆ ಅವಳ ಅಂತರಾಳದಲ್ಲಿ ಮೂಡಿರುವ ಪ್ರಶ್ನೆಗಳು ಶತಮಾನದಿಂದ ಸೂತಪುತ್ರನೆಂಬ ಕಳಂಕವನ್ನೆ ಧಿಕ್ಕರಿಸುತ್ತಾಳೆ. ಸೂಪ್ತ ಪ್ರಜ್ಞೆಯಲ್ಲಿ ಅಡಗಿದ ಬೇಡ ಬೇಡ ಸೂತಪುತ್ರ ಬೇಡ"[6] ಎಂದು ಕಿರುಚಿಕೊಂಡಿಲ್ಲದೆ ಹೋಗಿದ್ದರೆ, ಯಾಜ್ಞಸೇನೆ ಕರ್ಣನ ಹೆಂಡತಿಯಾಗುತ್ತಿದ್ದಳು. ಮಹಾಭಾರತ ಯುದ್ಧವೇ ನಡೆಯುತ್ತಿರಲಿಲ್ಲ. ಜಾತಿ ಸೂತಕದ ಸಂಕೋಲೆ ಮುರಿದು ಬೀಳುತ್ತಿತ್ತು. ಈ ಹಿನ್ನೆಲೆಯಲ್ಲಿಯೇ ಯಾಜ್ಞಸೇನೆಯ ಆಲೋಚನೆಗಳು ಚಿಗುರೊಡೆಯುತ್ತವೆ. "ಹಿಂದೊಮ್ಮೆ ನಿಮ್ಮ ತಾತ ಭೀಷ್ಮನು ಅಂಬೆ ಅಂಬಾಲಿಕೆ ಎಂಬ ಸೋದರಿಯರನ್ನು ಒಂದು ಸ್ವಯಂವರದಿಂದ ಗೆದ್ದು ತಂದಿದ್ದನಂತೆ. ಸ್ವಯಂವರದಲ್ಲಿ ಗೆದ್ದು ತಂದ ಕನ್ಯೆಯನ್ನು ತಾನು ಮದುವೆಯಾಗುವುದನ್ನು ಬಿಟ್ಟು, ತನ್ನ ತಮ್ಮನಾದ ವಿಚಿತ್ರವೀರ್ಯನೊಂದಿಗೆ ಮದುವೆಯಾಗಲು ಕೇಳಿದನಂತೆ. ಅವನು ಬ್ರಹ್ಮಚಾರಿ ಅಲ್ಲವೇ! ಹೆಣ್ಣನ್ನು ಮುಟ್ಟುವುದು ಕೂಡ ಪಾಪ ಅವನಿಗೆ"[7] ಎಂದು ವ್ಯಂಗ್ಯವಾಗಿ ಯಾಜ್ಞಸೇನೆಯು ಅರ್ಜುನನಿಗೆ ಕೇಳುತ್ತಾಳೆ. ಇವಳು ಈ ವ್ಯಂಗ್ಯದ ಮಾತುಗಳ ಮುಖಾಂತರ ಪಾಂಡವ ವಂಶವನ್ನೇ ಟೀಕಿಸುತ್ತಾಳೆ. ಸ್ತ್ರೀಯರನ್ನು ಪಾಂಡವ ವಂಶವು ಯಾವತ್ತೂ ಗೌರವದಿಂದ ಕಂಡಿಲ್ಲ, ಕೇವಲ ಅಲ್ಲಿ ಪೌರುಷಕ್ಕೆ ಮಾತ್ರ ಬೆಲೆ ಎನ್ನುವುದು ಲೇಖಕಿಯ ವಾದವಾಗಿದೆ.

ಗೊಡ್ಡು ಆದರ್ಶಗಳ ಅಡಿಯಲ್ಲಿ ಹೆಣ್ಣಿನ ಬಲಿಯನ್ನು ಯಾಜ್ಞಸೇನಿಯು ವ್ಯಂಗ್ಯವಾಗಿಯೇ ಪ್ರಶ್ನಿಸುತ್ತಾಳೆ. ಮುಂದುವರೆದು "ನೀನು ನಿನ್ನ ತಾತನಿಗಿಂತ ವಾಸಿ, ಗೆದ್ದು ತಂದ ನನ್ನನ್ನು ನಿನ್ನ ಸೋದರ ಭೋಗಕ್ಕೆ ಮಾತ್ರ ಬಿಟ್ಟುಕೊಡದೆ, ನೀನು ಅದರಲ್ಲಿ ಭೋಗಿಯಾಗುತ್ತಿದ್ದೀಯಾ?"[8] ಎಂದು ಮರು ಪ್ರಶ್ನೆ ಹಾಕುತ್ತಾಳೆ. ಮುಂದಿನ ಕಥೆ ಎಲ್ಲರಿಗೂ ತಿಳಿದಿರುವುದೇ ಅದನ್ನು ಇಲ್ಲಿ ಚರ್ಚಿಸದೇ, ಮುಂದೆ ನಡೆದಿರುವ ಲೇಪದಾಟದಲ್ಲಿ ಯಾಜ್ಞಸೇನೆಯ ಪ್ರತಿರೋಧವೂ ಹೀಗೆ ಮುಂದುವರೆಯುತ್ತದೆ. "ಎಲೋ ಧೂತ, ನೀನು ಹೋಗಿ ಆ ಜೂಜುಗಾರನನ್ನು ಕೇಳಿಕೊಂಡು ಬಾ. ಅವನು ಮೊದಲು ತನ್ನನ್ನು ತಾನು ಸೋತನೋ ಅಥವಾ ನನ್ನನ್ನು ಸೋತನೋ?"[9] ಎಂದು ರಾಜ ಸಭೆಗೆ ಕರೆಯಲು ಬಂದ ದೂತನಿಗೆ ಹೇಳಿ ಕಳಿಸುತ್ತಾಳೆ. ನಾವು ಒಟ್ಟಾರೆಯಾಗಿ ರಾಮಾಯಣ ಮಹಾಭಾರತಗಳ ಕಥೆಯನ್ನು ನೋಡಿದರೆ ಅಲ್ಲಿಯ ಸ್ತ್ರೀಯರು ಪತಿಯೇ ದೈವ-ಸರ್ವಸ್ವ ಅವನ ಆಜ್ಞೆಯನ್ನು ಮೀರಬಾರದು ಎನ್ನುವ ಮನೋ ಧೋರಣೆಯನ್ನೇ ಒಳಗೊಂಡಿರುವುದನ್ನು ಕಾಣುತ್ತೇವೆ.

ಹಾಗೆಯೇ ಇಂದಿನ ಆಧುನಿಕತೆಯಲ್ಲಿಯೂ ಮಹಿಳೆಯರು ಭಾಗಶಃ ಹಾಗೆ ನಡೆದುಕೊಳ್ಳುತ್ತಾರೆ. ಆದರೆ ಯಾಜ್ಞಸೇನಿಯು ಹಾಗೆ ಮಾಡದೆ ಗಂಡ ತನ್ನನ್ನು ಪಣಕ್ಕಿಟ್ಟು ಸೋತಿದ್ದಾನೆ ಎಂದು ತಿಳಿದಾಗ ಪ್ರಜ್ಞಾಪೂರ್ವಕವಾಗಿ ದಿಟ್ಟ ನಿರ್ಧಾರವನ್ನು ತೆಗೆದುಕೊಂಡು, ರಾಜಸಭೆಯ ಎದುರಿಗೆ ಗಂಡನಿಗೆ ಪ್ರಶ್ನೆಯನ್ನು ಒಡ್ಡುತ್ತಾಳೆ. ನಾನು ನಿಮ್ಮ ಅಡಿಯಾಳಲ್ಲ ಅಥವಾ ಮಹಿಳೆ ಕೇವಲ ಭೋಗದ ವಸ್ತು ಅಲ್ಲ, ಅವಳಿಗೆ ಆಸೆ, ಆಕಾಂಕ್ಷೆಗಳು ಇವೆ. ಅವಳು ಸ್ವತಂತ್ರಳು ಎನ್ನುವ ಮನೋಭಾವವು ಈ ಪ್ರಶ್ನೆಗಳಲ್ಲಿ ಅಡಗಿರುವುದನ್ನ ಕಾಣುತ್ತೇವೆ. ದುಶ್ಯಾಸನ ಯಾಜ್ಞಸೇನೆಯ ಮುಡಿಹಿಡಿದು ಸಭೆಗೆ ಎಳೆದು ತಂದು, ನೆಲದ ಮೇಲೆ ಬಿಸಾಕಿದ. ಐದು ಜನ ಪಾಂಡವರು ಸುಮ್ಮನೆ ನೋಡುತ್ತಿದ್ದರು. ಭೀಮಸಿಟ್ಟಿನಿಂದ ಮೇಲಕ್ಕೆಳುತ್ತಿದ್ದ ಆದರೆ ಯುಧಿಷ್ಠಿರ ಅವನನ್ನು ತಡೆಯುತ್ತಾನೆ. ಆಗ ಯಾಜ್ಞಸೇನಿ "ನಿನಗಂತೂ ಧೈರ್ಯವಿಲ್ಲ, ಹೆಂಡತಿಯನ್ನು ಪಣಕ್ಕಿಟ್ಟು ಬೇರೆಯವರಿಗೆ ಮಾರಿಕೊಳ್ಳುವುದು ನಿನ್ನಂತಹ ಜೂಜು ಕೋರರ ಜಾಯಮಾನವಾಯಿತು. ಅವನಾದರೂ ಎದ್ದು ತನ್ನ ಪೌರುಷ ತೋರಿಸಲಿ, ಅವನನ್ನೇಕೆ ತಡೆಯುವೆ. ಪಣಕ್ಕೆ ಇಡಲು ನಿನಗೆ ಬೇರೆ ಏನು ಇರಲಿಲ್ಲವೇ? ನಿನ್ನನ್ನೇ ಸೋತ ಮೇಲೆ, ನನ್ನನ್ನು ಒಡ್ಡುವ ಹಕ್ಕು ನಿನಗೆ ಎಲ್ಲಿದೆ? ನನ್ನನ್ನು ಏನೆಂದು ತಿಳಿದುಕೊಂಡಿರುವೆ? ನಿನ್ನ ಕೈಯಲ್ಲಿ ಆಟದ ವಸ್ತುವಾದನೆ?"[10] ಎಂದು ಸಿಟ್ಟಿನಿಂದ ಕೇಳುತ್ತಾಳೆ. ಇಲ್ಲಿ ಯಾಜ್ಞಸೇನೆಯ ಪ್ರತಿಯೊಂದು ಪ್ರಶ್ನೆಯಲ್ಲಿಯೂ ಪಾಂಡವರು ಅವಳ ಮೇಲೆ ಮಾಡಿದ ಶೋಷಣೆಗಳನ್ನು ಎತ್ತಿ ತೋರಿಸುತ್ತದೆ. ಧರ್ಮದ ರಕ್ಷಕರಾದವರು, ತನ್ನ ಹೆಂಡತಿಯನ್ನು ರಕ್ಷಿಸಿಕೊಳ್ಳದವರು ಹೇಗೆ ಧರ್ಮಪಾಲಕರಾಗುತ್ತಾರೆ. ಧರ್ಮವೆಂದರೆ ಏನು? ಅಣ್ಣ , ತಮ್ಮರನ್ನು ಜೂಜಾಟದಲ್ಲಿ ಪಣಕ್ಕಿಟ್ಟು , ಆಸ್ತಿ-ಪಾಸ್ತಿ ಕೊನೆಗೆ ಹೆಂಡತಿಯನ್ನು ವಸ್ತುವಾಗಿ ಮಾಡಿರುವುದು ಯಾವ ಧರ್ಮ? ಎಂದು ರಾಜಸಭೆಯಲ್ಲಿ ತನ್ನ ಪ್ರತಿರೋಧವನ್ನು ವ್ಯಕ್ತಪಡಿಸುತ್ತಾಳೆ.

ಮುಂದುವರೆದು ಸಭೆಯಲ್ಲಿ ದುಶ್ಯಾಸನ ಯಾಜ್ಞಸೇನೆಯ ಸೆರಗಿಗೆ ಕೈ ಹಾಕಲು ಪ್ರಯತ್ನಿಸುತ್ತಾನೆ. ಯಾಜ್ಞಸೇನೆ ಅಪ್ರಜ್ಞಾಪೂರ್ವಕವಾಗಿ ಕೃಷ್ಣ ಎಂದು ಕೂಗುತ್ತಾಳೆ. ಆದರೆ ಮರುಕ್ಷಣವೇ "ನನ್ನ ಪ್ರಜ್ಞೆ ಮರುಕಳಿಸಿತು. ಸ್ನಾನಕ್ಕೆ ಇಳಿದ ಗೋಪಿಕಾ ಸ್ತ್ರೀಯರ ಸೀರೆಗಳನ್ನು ಕದ್ದವನು ಕೃಷ್ಣ. ಎರಡು ಕೈಗಳನ್ನ ಮೇಲಕ್ಕೆ ಎತ್ತಿ ಬೆತ್ತಲೆಯಾಗಿಯೇ ನೀರಿನಿಂದ ಎದ್ದು ತನ್ನ ಎದುರಿಗೆ ಬರಬೇಕೆಂದು ಹಠ ಮಾಡಿ, ಅದನ್ನು ಸಾಧಿಸಿದ ಕೃಷ್ಣ, ಎಲ್ಲಾ ಗಂಡಸರು ಒಂದೇ!"[11] ಎಂದು ಹೇಳುವುದರ ಮುಖಾಂತರ ಗಾಯಕವಾಡ ಅವರು ಶತಮಾನದಿಂದ ಒಂದು ನಂಬಿಕೆಯಾಗಿ ಉಳಿದುಕೊಂಡು ಬಂದತಂಹ, ಕೃಷ್ಣನು ದ್ರೌಪದಿಗೆ ಸೀರೆಯನ್ನು ಕೊಟ್ಟು ಕಾಪಾಡಿದ ಎನ್ನುವ ಕಲ್ಪನೆಯನ್ನು ಮುರಿದು ಹಾಕುತ್ತಾರೆ. "ನನ್ನ ಶಕ್ತಿಯನ್ನು ಒಟ್ಟುಗೂಡಿಸಿ ನನ್ನ ಎಡಗಾಲಿನಿಂದ ದುಶ್ಯಾಸನನಿಗೆ ಝಾಡಿಸಿ ಒದ್ದೆ "[12] ಎಂದು ತಮ್ಮ ಕಾದಂಬರಿಯಲ್ಲಿ ಜಯದೇವಿ ಗಾಯಕವಾಡ ಅವರು ಬರೆಯುತ್ತಾರೆ. ಹೆಣ್ಣನ್ನು ಬೆತ್ತಲೆ ಗೊಳಿಸಿ 16000 ಹೆಂಡತಿಯರಿಗೆ ಗಂಡನಾಗಿ ಕಪಟ ರಾಜಕೀಯ ಮಾಡಿದವನು ಹೇಗೆ ಧರ್ಮದ ಹಾದಿಯಲ್ಲಿ ನಡೆಯಲು ಸಾಧ್ಯ? ಹೇಗೆ ಹೆಣ್ಣನ್ನು, ಹೆಣ್ಣಿನ ಮಾನವನ್ನು ಕಾಪಾಡಲು ಸಾಧ್ಯ? ಎನ್ನುವ ಪ್ರಶ್ನೆಗಳಿಗೆ ಉತ್ತರವಾಗಿ ಯಾಜ್ಞಸೇನಿಯ ಪಾತ್ರವೆ ಈ ಕಾದಂಬರಿಯಲ್ಲಿ ಉತ್ತರವಾಗಿ ನಿಲ್ಲುತ್ತದೆ. "ಏನೋ ನಾಯಿ ನನ್ನನ್ನು ಕಾಪಾಡುವವರು

ಇಲ್ಲವೆಂದು ತಿಳಿದುಕೊಂಡಿದ್ದಿಯಾ, ನನ್ನ ಗಂಡಂದಿರು ಹೇಡಿಗಳು, ಮಹಾರಥಿ ಅತಿರಥ ಎನಿಸಿಕೊಂಡ ಭೀಷ್ಮ, ದ್ರೋಣ, ಕೃಪರು ನನ್ನನ್ನು ಕಾಪಾಡದೇ ಇದ್ದಿರಬಹುದು. ಆದರೆ ನಿಮ್ಮೆಲ್ಲರ ಮುಂದೆ ನನ್ನನ್ನು ನಾನು ನನ್ನ ಶಕ್ತಿಯಿಂದ ರಕ್ಷಿಸಿಕೊಂಡಿದ್ದೇನೆ. ಹೆಣ್ಣು ಅಬಲೆ ಎಂದು ತಿಳಿಯಬೇಡಿ, ಅವಳ ಮಾಂಸ ಖಂಡದಲ್ಲಿಯೂ ಬಿಸಿ ರಕ್ತವಿದೆ. ನಿಮ್ಮನ್ನು ಇನ್ನು ಮುಂದೆ ನಾನು ಸುಮ್ಮನೆ ಬಿಡುವುದಿಲ್ಲ ಜ್ಞಾಪಕದಲ್ಲಿ ಇಟ್ಟುಕೊಳ್ಳಿ"[13] ಎಂದು ಯಾಜ್ಞಸೇನೆ ಹೇಳುತ್ತಾಳೆ. ತನ್ನ ರಕ್ಷಣೆ ತಾನು ಮಾಡಿಕೊಳ್ಳುವಷ್ಟು ಸಮರ್ಥಳು ತಾನು, ತನಗೆ ಯಾರ ಸಹಾಯವೂ ಬೇಕಿಲ್ಲ, ತಾನು ಶಕ್ತಿವಂತಳು ಎಂದು ಸಭೆಯ ಮುಂದೆ ಸಾಬೀತುಪಡಿಸಿಕೊಳ್ಳುತ್ತಾಳೆ. ಯಾಜ್ಞಸೇನಿಯ ಈ ಮಾತುಗಳು ನವ ಪೀಳಿಗೆಗೆ ಪ್ರೇರಣದಾಯಕವಾದ ನುಡಿಗಳಾಗಿವೆ.

ಮುಂದೆ ಯುದ್ಧದ ನಂತರ ಯಾಜ್ಞಸೇನಿಯು ಮಕ್ಕಳನ್ನು ಕಳೆದುಕೊಂಡ ಬಳಿಕ ಯುದ್ಧದ ಘೋರತೆ ಅವಳ ಅರಿವಿಗೆ ಬರುತ್ತದೆ. "ನಿಮ್ಮನ್ನು ಯುದ್ಧಕ್ಕಾಗಿ ಬೆಳೆಸುತ್ತಿರಲಿಲ್ಲ, ಬದಲಾಗಿ ಮಾನವೀಯ ಗುಣಗಳನ್ನು ನಿಮಗೆ ಹೇಳಿಕೊಟ್ಟು, ಮನುಷ್ಯರನ್ನಾಗಿ ಬಾಳಲು ಹೇಳುತ್ತಿದ್ದೆ".[14] ಯುದ್ಧದಿಂದ ಎಲ್ಲವನ್ನು ಕಳೆದುಕೊಂಡು ಒಬ್ಬಂಟಿಯಾದ ಯಾಜ್ಞಸೇನಿಗೆ ಸೇಡು, ಪ್ರತಿಕಾರ ಮುಖ್ಯವಲ್ಲ, ಮಾನವೀಯ ಗುಣ ಮನುಷ್ಯತ್ವವೇ ಮುಖ್ಯ ಎನ್ನುವುದು ಅರಿವಿಗೆ ಬರುತ್ತದೆ. ಇದಕ್ಕೆ ಸೂತ್ರಧಾರ ಕೃಷ್ಣ, ಅವನ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಯುದ್ಧವನ್ನು ತಡೆಯದೆ ಅದಕ್ಕೆ ಪ್ರೋತ್ಸಾಹವನ್ನು ಕೊಟ್ಟದ್ದು ತಡವಾಗಿ ಯಾಜ್ಞಸೇನಿಗೆ ತಿಳಿಯುತ್ತದೆ. ಸಭೆಯಲ್ಲಿ, ಶವಗಳ ಮುಂದೆ ತಲೆತಗ್ಗಿಸಿ ಕುಳಿತ ಗಂಡಂದಿರು ಜೀವಂತ ಶವಗಳಾಗಿದ್ದಾರೆ. ತನ್ನ ಮಕ್ಕಳ ಶವ ಸಂಸ್ಕಾರವನ್ನು ತಾನೇ ಮಾಡುವ ಪ್ರಸಂಗ ಮಾರ್ಮಿಕವಾಗಿದೆ. ಯುಧಿಷ್ಠಿರನ ಕೈಯಲ್ಲಿದ್ದ ಪಂಜನ್ನು ಕಸಿದುಕೊಂಡು "ನೀವುಗಳು ಗಂಡಸರೇ ಅಲ್ಲ, ಆದ್ದರಿಂದ ನನ್ನ ಮಕ್ಕಳಿಗೆ ನಾನೇ ಅಗ್ನಿ ಸಂಸ್ಕಾರ ಮಾಡುವೆ. ನಿಮ್ಮೆಲ್ಲರ ಕೆಲಸ ಬರಿ ದೂರದಲ್ಲಿ ನಿಂತು ನೋಡುವುದು ಅಷ್ಟೇ"[15] ಎನ್ನುತ್ತಾ ಚಿತೆಗೆ ಅಗ್ನಿಸ್ಪರ್ಶ ಮಾಡುತ್ತಾಳೆ. ಇಂಥ ಪರಿವರ್ತನೆಗಳು ಈ ಕಾದಂಬರಿಯನ್ನು ಸಮಕಾಲೀನವಾಗಿಸಿದೆ.

ಐದು ಜನ ಪಾಂಡವರಿಗಾಗಿ ಕುಂತಿಯ ಮಾತಿಗೆ ಮರುಳಾಗಿ ಹೆಜ್ಜೆ ಹೆಜ್ಜೆಗೂ ಯಾಜ್ಞಸೇನಿಯು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾ ಹೋಗುತ್ತಾಳೆ. ಇಲ್ಲದ ಅಸ್ತಿತ್ವದ ಹುಡುಕಾಟದಲ್ಲಿ ಇರುವುದನ್ನು ಕಳೆದುಕೊಳ್ಳುತ್ತಾಳೆ. ಒಬ್ಬ ಗಂಡನಿಂದ ಅನುಭವಿಸಿದ ಮಾನಸಿಕ ಹಿಂಸೆಗೆ ಒಳಗಾದ ಹೆಣ್ಣುಗಳ ಸ್ಥಿತಿಯೇ ತುಂಬಾ ಚಿಂತಾ ಜನಕವಾಗಿರುವಾಗ, ಐವರನ್ನು ಕಟ್ಟಿಕೊಂಡ ಯಾಜ್ಞಸೇನಿಯೂ ಪ್ರತಿಕ್ಷಣವು ಮಾನಸಿಕವಾಗಿ ಹಿಂಸೆಗೆ ಒಳಗಾಗುತ್ತಾಳೆ. ಅವರನ್ನು ಒಗ್ಗಟ್ಟಿನಲ್ಲಿ ಇಡುವ ಪ್ರಯತ್ನದಲ್ಲಿ, ತನ್ನ ಮನಸ್ಸಿನ ಸ್ಥಿಮಿತತೆಯನ್ನು ಕಳೆದುಕೊಳ್ಳುತ್ತಾಳೆ. ಐವರ ಅಡಿಯಾಳಾಗಿ ಇಡೀ ಜೀವನ ಸವೆಸಿದ ಅವಳು ಕೊನೆಗೆ ನನ್ನಂತೆ ಇನ್ನೊಬ್ಬ ಯಾಗ್ನಿಸೇನೆ ಬರುವುದು ಬೇಡ ಎಂದು ಹೇಳುತ್ತಾಳೆ. ಈ ಕಾದಂಬರಿ ಯುದ್ಧಕ್ಕೂ ಲೇಖಕಿ ದಲಿತತ್ವದ ಪ್ರತಿರೋಧದ ಜೊತೆಗೆ ಯಜ್ಞಸೇನೆಯ ಮನಸ್ಸಿನ ಆಳದ ಮಾತುಗಳು, ಪ್ರಶ್ನೆಗಳನ್ನು ಹೊರ ಹಾಕಿದ್ದಾರೆ. ಇದು ಕೇವಲ ಒಬ್ಬಳೆ ಯಾಜ್ಞಸೇನೆ ಒಬ್ಬ ಗಾಯಕವಾಡರ ಪ್ರತಿರೋಧವಾಗದೇ ಇಡೀ ಮಹಿಳಾ ಜಗತ್ತಿನ ಅಂತರಾಳದಲ್ಲಿ ಹುದುಗಿರುವ ಅನೇಕ ಪ್ರಶ್ನೆಗಳ ಆಗರವೇ ಈ ಕಾದಂಬರಿಯಾಗಿದೆ.

ಶತಮಾನದಿಂದ ಮಾತನಾಡದೆ ಮೌನ ವಹಿಸಿದ ದ್ರೌಪದಿ ಮಾತನಾಡಲು ಪ್ರಾರಂಭಿಸಿದಾಗ, ಅವಳ ಬಾಯಿಂದ ಏನು ಹೊರ ಬರುತ್ತದೆ ಮತ್ತು ಏನಾಗುತ್ತದೆ, ಎಂದು ಹುಡುಕುವ ಗಾಯಕವಾಡರ 'ಯಾಜ್ಞಸೇನಿಯ ಆತ್ಮಕಥನ' ಕಾದಂಬರಿಯ ಮೂಲಕ ತಿಳಿಸಿದ್ದಾರೆ. ಒಬ್ಬ ಶೋಷಿತ ಸ್ತ್ರೀಯಾಗಿ ಅವಳ ಅಂತರಾಳದ ಅನುಭವದ ತಾಜಾತನ ಇಲ್ಲಿ ಒಡೆದು ಕಾಣುತ್ತದೆ. ಆಕ್ರೋಶಕಿಂತ ನೋವೇ ಇಲ್ಲಿ ಜೀವನವಾಗಿದೆ. ಅಸ್ಪೃಶ್ಯ ಮಹಿಳೆಯು ಅನುಭವಿಸುವ ನೋವುಗಳಿಗಿಂತಲೂ ಮೇಲ್ವರ್ಗದ ಮಹಿಳೆಯು ಶೋಷಣೆಯಲ್ಲಿ ಕಡಿಮೆ ಪ್ರಮಾಣವನ್ನ ಅನುಭವಿಸುತ್ತಾಳೆ. ಆದರೂ ಅವಳು ಶೋಷಿತಳಾಗಿರುವ ಕಾರಣಕ್ಕೆ ಈ ಲೇಖನದಲ್ಲಿ ಅವಳನ್ನು ದಲಿತ ಮಹಿಳೆ ಎಂದು ಗುರುತಿಸಿ, ಅವಳ ಅಂತರಾಳದ ತೋಳಲಾಟಗಳನ್ನು ಮತ್ತು ನೋವುಗಳನೆಲ್ಲ ದಲಿತತತ್ವದ ಹಿನ್ನೆಲೆಯಲ್ಲಿ ಗುರುತಿಸಲಾಗಿದೆ. ಒಬ್ಬ ಶಿಕ್ಷಿತ ಮಹಿಳೆಯಾಗಿ ಶೋಷಣೆಗೆ ಒಳಗಾದ ಇನ್ನೊಬ್ಬ ಮಹಿಳೆಯ ಅಂತರಂಗವನ್ನು ಬಿಚ್ಚಿಟ್ಟಿರುವ ಈ ಕಾದಂಬರಿಯೂ ಸಾಹಿತ್ಯ ಲೋಕದಲ್ಲಿ ಹೊಸ ಸಂಚಲನವನ್ನು ಮೂಡಿಸಿದೆ. ಈ ಲೇಖನದಲ್ಲಿ ಚರ್ಚಿಸಿರುವ ಎಲ್ಲಾ ಘಟನೆ, ಪ್ರಸಂಗಗಳು ದಲಿತತತ್ವದ ನೆಲೆಗಳ ರೂಪದಲ್ಲಿ ಹೇಳಲಾಗಿದೆ.

## ಅಡಿಟಿಪ್ಪಣಿಗಳು:


1. ಅರವಿಂದ ಮಾಲಗತ್ತಿ. (2014). ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು. ಪು.ಸಂ. 158--159
2. ಅರವಿಂದ ಮಾಲಗತ್ತಿ. (2014). ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು. ಪು.ಸಂ. 159
3. ಅರವಿಂದ ಮಾಲಗತ್ತಿ. (2014). ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು. ಪು.ಸಂ. 25
4. ಹಿರೇಮಠ ಎಸ್. ಎಸ್. (2018). ದಲಿತ ಸಂಸ್ಕೃತಿ. ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ. ಪು.ಸಂ. 15
5. ವಿಜಯಕುಮಾರ ಬಿ. ಬೀಳಗಿ. (2018). ದಲಿತ ಸಂವೇದನೆಯ ಲೇಖಕಿ ಡಾ.ಜಯದೇವಿ ಗಾಯಕವಾಡ. ಶರಣ ಉರಿಲಿಂಗ ಪೆದ್ದಿ ಮಠ ಟ್ರಸ್ಟ್ [ರಿ]. ಬೀದರ. ಪು.ಸಂ. 108.
6. ಜಯದೇವಿ ಗಾಯಕವಾಡ. (2020). ಯಾಜ್ಞಸೇನಿಯ ಆತ್ಮಕಥನ. ಸಿದ್ಧಲಿಂಗೇಶ್ವರ ಪ್ರಕಾಶನ. ಕಲಬುರ್ಗಿ. ಪು.ಸಂ. 12
7. ಜಯದೇವಿ ಗಾಯಕವಾಡ. (2020). ಯಾಜ್ಞಸೇನಿಯ ಆತ್ಮಕಥನ. ಸಿದ್ಧಲಿಂಗೇಶ್ವರ ಪ್ರಕಾಶನ. ಕಲಬುರ್ಗಿ. ಪು.ಸಂ. 21
8. ಜಯದೇವಿ ಗಾಯಕವಾಡ. (2020). ಯಾಜ್ಞಸೇನಿಯ ಆತ್ಮಕಥನ. ಸಿದ್ಧಲಿಂಗೇಶ್ವರ ಪ್ರಕಾಶನ. ಕಲಬುರ್ಗಿ. ಪು.ಸಂ. 21
9. ಜಯದೇವಿ ಗಾಯಕವಾಡ. (2020). ಯಾಜ್ಞಸೇನಿಯ ಆತ್ಮಕಥನ. ಸಿದ್ಧಲಿಂಗೇಶ್ವರ ಪ್ರಕಾಶನ. ಕಲಬುರ್ಗಿ. ಪು.ಸಂ. 53
10. ಜಯದೇವಿ ಗಾಯಕವಾಡ. (2020). ಯಾಜ್ಞಸೇನಿಯ ಆತ್ಮಕಥನ. ಸಿದ್ಧಲಿಂಗೇಶ್ವರ ಪ್ರಕಾಶನ. ಕಲಬುರ್ಗಿ. ಪು.ಸಂ. 54
11. ಜಯದೇವಿ ಗಾಯಕವಾಡ. (2020). ಯಾಜ್ಞಸೇನಿಯ ಆತ್ಮಕಥನ. ಸಿದ್ಧಲಿಂಗೇಶ್ವರ ಪ್ರಕಾಶನ. ಕಲಬುರ್ಗಿ.

ಪು.ಸಂ. 56

12. ಜಯದೇವಿ ಗಾಯಕವಾಡ. (2020). ಯಾಜ್ಞಸೇನಿಯ ಆತ್ಮಕಥನ. ಸಿದ್ಧಲಿಂಗೇಶ್ವರ ಪ್ರಕಾಶನ. ಕಲಬುರ್ಗಿ. ಪು.ಸಂ. 56
13. ಜಯದೇವಿ ಗಾಯಕವಾಡ. (2020). ಯಾಜ್ಞಸೇನಿಯ ಆತ್ಮಕಥನ. ಸಿದ್ಧಲಿಂಗೇಶ್ವರ ಪ್ರಕಾಶನ. ಕಲಬುರ್ಗಿ. ಪು.ಸಂ. 56
14. ಜಯದೇವಿ ಗಾಯಕವಾಡ. (2020). ಯಾಜ್ಞಸೇನಿಯ ಆತ್ಮಕಥನ. ಸಿದ್ಧಲಿಂಗೇಶ್ವರ ಪ್ರಕಾಶನ. ಕಲಬುರ್ಗಿ. ಪು.ಸಂ. 109
15. ಜಯದೇವಿ ಗಾಯಕವಾಡ. (2020). ಯಾಜ್ಞಸೇನಿಯ ಆತ್ಮಕಥನ. ಸಿದ್ಧಲಿಂಗೇಶ್ವರ ಪ್ರಕಾಶನ. ಕಲಬುರ್ಗಿ. ಪು.ಸಂ. 112

## ಆಕರ ಗ್ರಂಥ:


1. ಜಯದೇವಿ ಗಾಯಕವಾಡ. (2020). ಯಾಜ್ಞಸೇನಿಯ ಆತ್ಮಕಥನ. ಸಿದ್ಧಲಿಂಗೇಶ್ವರ ಪ್ರಕಾಶನ. ಕಲಬುರ್ಗಿ.


## ಪರಾಮರ್ಶನ ಗ್ರಂಥಗಳು:


1. ವಿಜಯಕುಮಾರ ಬಿ. ಬೀಳಗಿ. (2018). ದಲಿತ ಸಂವೇದನೆಯ ಲೇಖಕಿ ಡಾ.ಜಯದೇವಿ ಗಾಯಕವಾಡ. ಶರಣ ಉರಿಲಿಂಗ ಪೆದ್ದಿ ಮಠ ಟ್ರಸ್ಟ್ [ರಿ]. ಬೀದರ.
2. ಸಿದ್ಧಲಿಂಗಯ್ಯ. (2009). ಊರಿಕಂಡಾಯ. ಅಂಕಿತ ಪುಸ್ತಕ. ಬೆಂಗಳೂರು.
3. ಹಿರೇಮಠ ಎಸ್. ಎಸ್. (2018). ದಲಿತ ಸಂಸ್ಕೃತಿ. ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
4. ನಾಗಮಣಿ ಜಿ. (2019). ದಲಿತ ಮಹಿಳಾ ಚಳುವಳಿಯ ಅಧ್ಯಯನ. ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು.
5. ಅರವಿಂದ ಮಾಲಗತ್ತಿ. (2014). ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.